ಹೇಳುತ್ತಿದ್ದಾರೆ. ಶ್ರೀ ಹೆಚ್. ವಿಶ್ವನಾಥ್ ರವರು ಲೋಕಸಭಾ ಸದಸ್ಯರಾಗಿರುವುದರಿಂದ ಈ ವಿಷಯವನ್ನೂ ಕೂಡ ತಾವು ಲೋಕಸಭಾ ಅಧ್ಯಕ್ಷರಿಗೆ ಈ ವಿಚಾರವನ್ನು, ಈ ಪ್ರಸ್ತಾಪವನ್ನು ಪರಿಶೀಲನೆ ಮಾಡಿದ ನಂತರ ಕಳುಹಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಈ ಸೂಚನೆಯನ್ನು ಪರಶೀಲಿಸಿ ಮುಂದಿನ ಕ್ರಮ ಕೈಗೊಳ್ಳುತ್ತೇನೆ.

12. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ:

ವಿಷಯ: ಬೀದಿ ನಾಯಿಗಳ ಹಾವಳಿಯಿಂದ ಮಗುವಿನ ಸಾವು ಕುರಿತು

ಶ್ರೀ ಎನ್. ಎಸ್. ನಂದೀಶ್ ರೆಡ್ಡಿ (ಕೆ. ಆರ್. ಪುರ): ಮಾನ್ಯ ಅಧ್ಯಕ್ಷರೆ, ದಿ:12-01-2011 ರಂದು ಅಂದರೆ ನಿನ್ನೆ 'ಸಂಜೆವಾಣಿ' ಪತ್ರಿಕೆಯಲ್ಲಿ ಪ್ರಕಟವಾಗಿರುವ ಸುದ್ದಿ ಪ್ರಕಾರ ಬೀದಿ ನಾಯಿಗಳ ಹಾವಳಿ ಬೆಂಗಳೂರು ನಗರದಲ್ಲಿ ಹೆಚ್ಚಾಗಿದೆ. ಒಂದು ಮಗುವನ್ನು ನಾಯಿ ಎತ್ತಿಕೊಂಡು ಹೋಗಿ ತಿಂದು, ಆ ಮಗುವಿನ ಪ್ರಾಣವನ್ನು ತೆಗೆದಿರುವ ಸುದ್ದಿ 'ಸಂಜೆವಾಣಿ' ಪತ್ರಿಕೆಯಲ್ಲಿ ಮತ್ತು ಇವತ್ತಿನ ಎಲ್ಲ ಪತ್ರಿಕಗಳಲ್ಲಿ ಪ್ರಕಟವಾಗಿದೆ. ಅದಕ್ಕೆ ತಕ್ಷಣ ನಮ್ಮ ಸರ್ಕಾರದ ಕಡೆಯಿಂದ ಒಂದು ವಿಶೇಷವಾದ ರೀತಿಯಲ್ಲಿ ಕ್ರಮವನ್ನು ತೆಗೆದುಕೊಂಡು ಈ ನಾಯಿಗಳ ಹಾವಳಿಯಿಂದ ಜನರನ್ನು ತಪ್ಪಿಸಬೇಕೆಂದು ನನ್ನ ಪ್ರಾರ್ಥನೆ.

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲಮಂಡಲಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ನಂದೀಶ್ ರೆಡ್ಡಿಯವರು ಏನು ಪ್ರಸ್ತಾಪಿಸಿದ್ದಾರೆ ಆ ಸುದ್ದಿ ನಿನ್ನೆ ಸಂಜೆಯ ಪತ್ರಿಕೆ ಮತ್ತು ಇಂದಿನ ದಿನಪತ್ರಿಕೆಗಳಲ್ಲಿ ವರದಿಯಾಗಿದೆ. ಇದು ಬಹಳ ಆಘಾತಕಾರಿಯಾದ ಸುದ್ದಿಯಾಗಿದೆ. ಬಹಳ ವರ್ಷಗಳಿಂದ ಈ ಬೀದಿ ನಾಯಿಗಳ ನಿಯಂತ್ರಣ ಮಾಡಬೇಕೆಂದು ಕಾರ್ಯಕ್ರಮವನ್ನೇ ಹಮ್ಮಿಕೊಂಡು BBMP ಕಾಯ್ದೆ ಮಾಡಿಕೊಂಡು ಬಂದಿದೆ. ಆದರೆ, ಹಿಂದೆ ಕೇಂದ್ರದಿಂದ ಬಂದಿರುವ ಒಂದು ಸೂಚನೆ ಮೇರೆಗೆ ಬೀದಿ ನಾಯಿಗಳನ್ನು ಕೊನೆಗೊಳಿಸುವ ಪ್ರಯತ್ನಕ್ಕೆ ಕೂಡ ನಮಗೆ ಸ್ವಲ್ಪ ಹಿಂದೇಟು ಬಿದ್ದಿದೆ. ಅದಕ್ಕೆ

ಅವುಗಳಿಗೆ ಒಂದು ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡಿ ಅವುಗಳನ್ನು ಬಿಡುವ ಕಾರ್ಯಕ್ರಮ ಹಾಕಿಕೊಂಡು ಬಂದಿದ್ದಾರೆ. ಆದರೆ, ನಿನ್ನೆ ನಡೆದ ದುರಂತ ಮತ್ತು ಈ ರೀತಿ ಇದು ಎರಡು ಅಥವಾ ಮೂರನೇ ಸಲ ಬೆಂಗಳೂರಿನಲ್ಲಿ ನಡೆಯುತ್ತಿರುವುದು. ಇದೊಂದು ಆಘಾತಕಾರಿಯಾದ ವಿಷಯವಾಗಿದೆ. ಇದು ಯಾವುದೇ ರೀತಿಯಲ್ಲಿಯೂ ಮರುಕಳಿಸಬಾರದು. ಅದಕ್ಕೋಸ್ಕರ ಸರ್ಕಾರ ಬಿ.ಬಿ.ಎಂ.ಪಿ.ಗೆ ಕಟ್ಟುನಿಟ್ಟಾದ ನಿರ್ದೇಶನವನ್ನು ನೀಡಿ ಕೂಡಲೆ ಈ ಬೀದಿ ನಾಯಿಗಳ ಉಪಟಳಕ್ಕೆ ಕೊನೆ ಹಾಡಬೇಕು ಮತ್ತು ಕಾರ್ಯಕ್ರಮ ಕಟ್ಟುನಿಟ್ಟಾಗಿ ಜಾರಿಯಾಗಬೇಕು. ಯಾವುದೋ ಅಮಾಯಕ ಮಕ್ಕಳು, ಹಸುಗೂಸುಗಳು ಈ ರೀತಿ ಬೀದಿ ನಾಯಿಗಳ ಪಾಲಾಗುವುದನ್ನು ಯಾರೂ ಕೂಡ ಸಹಿಸುವ ಸಂಗತಿಯಲ್ಲ. ಅದಕ್ಕೋಸ್ಕರ ಸರ್ಕಾರ ನಿರ್ದೇಶನ ಕೊಡುತ್ತದೆ, ಸರ್ಕಾರವೇ ಇದರ ಬಗ್ಗೆ ಉಸ್ತುವಾರಿ ತೆಗೆದುಕೊಳ್ಳುವ ಜವಾಬ್ದಾರಿ ಹೊತ್ತುಕೊಳ್ಳುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

13. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು:

ಕಾರ್ಯದರ್ಶಿ: ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ವಿಧೇಯಕ, 2011 ಅನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಅನುಬಂಧ – 4

14. ಶಾಸನ ರಚನೆ:

ವಿಧೇಯಕಗಳನ್ನು ಮಂಡಿಸುವುದು

(ಅ) ಕರ್ನಾಟಕ ಮೂಲಗೇಣಿ ಅಥವಾ ಒಳಮೂಲಗೇಣಿ ಗೇಣಿದಾರರಿಗೆ ಮಾಲೀಕತ್ವವನ್ನು ಪ್ರಧಾನ ಮಾಡುವ ವಿಧೇಯಕ, 2011

ಮಂಡನೆಗೆ ಅನುಮತಿ ಕೋರಿಕೆ

ಡಾ: ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ ಸಚಿವರು): (ಕಂದಾಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, 2011ನೇ ಸಾಲಿನ ಕರ್ನಾಟಕ ಮೂಲಗೇಣಿ ಅಥವಾ ಒಳಮೂಲಗೇಣಿ ಗೇಣಿದಾರರಿಗೆ ಮಾಲೀಕತ್ವವನ್ನು